ಹಾಕುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅವರು ನನ್ನ ಜೊತೆ ಕೂಡ ಚರ್ಚೆ ಮಾಡಿದ್ದಾರೆ. ನಾನು ಇಲಾಖೆಯ ಇಂಜಿನಿಯರ್‌ಗಳ ಜೊತೆ ಚರ್ಚಿಸಿದ್ದೇನೆ. ಒಂದು ವರದಿ ಪ್ರಕಾರ ಅದು ಟೆಕ್ನಿಕಲಿ ನಾಟ್ ಫೀಜಿಬಲ್, ಎಕನಾಮಿಕಲಿ ಅದು ವಯಬಲಲ್ಲ ಅಂತಲೂ ಹೇಳುತ್ತಾರೆ. ಪುನಃ ಇದನ್ನು ನಾನು ನೀರಾವರಿ ಸಚಿವರ ಜೊತೆ ಚರ್ಚೆ ಮಾಡಿ ಅಲ್ಲಿನ ಜಮೀನಿಗೆ ನೀರು ಕೊಡಿಸಬೇಕೆಂಬುದು ನಮಗೆ ನಿಮಗೆ ಗೊತ್ತಿದೆ. ಅದು ಎಕಾನಮಿಕಲಿ ವಯಬಲಲ್ಲದಿದ್ದರೂ ಏನಾದರೂ ಮಾಡಿ ಒಂದು ಕಾರ್ಯಕ್ರಮ ಹಾಕೋಣ, ಅವರ ಜೊತೆ ಒಂದು ಸಭೆಯನ್ನು ಏರ್ಪಾಡು ಮಾಡುತ್ತೇನೆ, ಆಗ ನೀವೂ ಬನ್ನಿ.

(ಈ) ಹುಣಸೂರು ತಾಲ್ಲೂಕು ಕೊಳೆಗಟ್ಟೆ ಗ್ರಾಮದ ಬಳಿ ರಸ್ತೆ ಅಪಘಾತ ಕುರಿತು.

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಅಧ್ಯಕ್ಷರೇ 26-4-99ರಂದು ಹುಣಸೂರು ತಾಲ್ಲೂಕು ಕೊಳಗಟ್ಟೆ ಗ್ರಾಮದ ಬಳಿ ಒಂದು ರಸ್ತೆ ಅಪಘಾತ ಆಯಿತು. ಆ ಅಪಘಾತದಲ್ಲಿ ಒಂದು ಕಾರಿಗೆ ಒಂದು ಮಗು ಸಿಕ್ಕಿ ಮರಣ ಹೊಂದಿತು. ಆ ಸಂದರ್ಭದಲ್ಲಿ ವಿರಾಜಪೇಟೆಯ ವಕೀಲ ಶ್ರೀ ಎಂಎಂ ಐಯಪ್ಪ ಅಲ್ಲಿಗೆ ಬಂದು ಪರಿಸ್ಥಿತಿಯ ಉದ್ವಿಗ್ನತೆ ತಿಳಿದುಕೊಂಡು ಅದನ್ನು ಸಮಾಧಾನ ಮಾಡಲಿಕ್ಕೆ ಪ್ರಯತ್ನಿಸುತ್ತಾರೆ. ಅಲ್ಲಿ ನೆರೆದಿದ್ದ ಜನ ಆ ಕಾರ್‌ನಲ್ಲಿದ್ದ ಪ್ರಯಾಣಿಕರ ಮೇಲೆ ಹಲ್ಲೆ ಮಾಡಬೇಕೆಂಬ ಅಭಿಪ್ರಾಯ ಗುಂಪಿನಲ್ಲಿ ಬರುತ್ತದೆ. ಆಗ ಐಯಪ್ಪನವರು ಸಮಾಧಾನ ಹೇಳಿ ಯಾವುದೇ ಕಾರಣಕ್ಕೂ ಕಾನೂನನ್ನು ಕೈಗೆ ಎತ್ತಿಕೊಳ್ಳಬೇಡಿ, ಪೋಲಿಸರಿಗೆ ಇದನ್ನು ವಹಿಸೋಣ, ಹುಣಸೂರಿನಿಂದ ಅವರು ಬರುವವರೆಗೂ ಸಮಾಧಾನವಾಗಿರಿ ಎಂದು ಹೇಳುತ್ತಿದ್ದರು. ಸುಮಾರು ಎರಡು ಗಂಟೆ ತರುವಾಯ ಅಲ್ಲಿಗೆ ಹುಣಸೂರಿನ ಪೋಲಿಸ್ ಅಧಿಕಾರಿ ರಾಜೀವ್ ಎಂಬುವವರು ಬರುತ್ತಾರೆ. ಬಂದು ಸಮಾಧಾನ ಮಾಡುತ್ತಿದ್ದ ಐಯಪ್ಪನವರ ಮೇಲೆ ಏಕಾಏಕಿ ಹಲ್ಲೆ ಮಾಡುತ್ತಾರೆ. ಅವಾಚ್ಯ ಶಬ್ದ ನಿಂದನೆ ಮಾಡುತ್ತಾರೆ. ಇದರಿಂದ ಐಯಪ್ಪನವರಿಗೆ ಆಘಾತ ಉಂಟಾಗುತ್ತದೆ. ಆದರೂ ಸಾವರಿಸಿಕೊಂಡು ನಾನು ಈ ಸಂದರ್ಭದಲ್ಲಿ ಏನು ಒಳ್ಳೆಯ ಕೆಲಸ ಮಾಡಬೇಕಾಗಿತ್ತೋ ಅದನ್ನು ನಾನು ಮಾಡುತ್ತಿದ್ದೇನೆ ಏಕಾಏಕಿ ನನ್ನ ಮೇಲೆ ಪ್ರಹಾರ ಮಾಡುವುದು ಸರಿಯಲ್ಲ ಎಂದು ಹೇಳಿದರೂ ಆ ಅಧಿಕಾರಿ ಹಲ್ಲೆ ಮುಂದುವರೆಸುತ್ತಾರೆ. ಇದನ್ನು ಪ್ರತಿಭಟಿಸಿ ವೀರಾಜಪೇಟೆಯ ಬಾರ್ ಅಸೋಸಿಯೇಷನ್‌ನವರು ಪ್ರತಿಭಟನೆ ಮಾಡುತ್ತಾರೆ, ಆ ಪೋಲಿಸ್ ಅಧಿಕಾರಿ ವಿರುದ್ಧ ಕ್ರಮತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಾರೆ. ಐಯಪ್ಪನವರೂ ಹಲವಾರು ಅಹವಾಲುಗಳ ಮೂಲಕ ಆ ಅಧಿಕಾರಿ ವಿರುದ್ಧ ಯಾವ ಕ್ರಮವನ್ನೂ ಸರ್ಕಾರ

ಕೈಗೊಂಡಿರುವುದಿಲ್ಲ. ಒಳ್ಳೆಯ ಕೆಲಸ ಮಾಡಿದ ಐಯಪ್ಪನವರ ಮೇಲೆ ಏಕಾಏಕಿ ಹಲ್ಲೆ ನಡೆಸಿದ ರಾಜೀವ್ ಎಂಬ ಪೋಲಿಸ್ ಅಧಿಕಾರಿ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ. ಬಾರ್ ಅಸೋಸಿಯೇಷನ್ನಿನ ಕಂಪ್ಲೇಂಟ್‌ಗೂ ಸರ್ಕಾರ ಏಕೆ ಕ್ರಮ ಜರುಗಿಸಲಿಲ್ಲ? ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ನಡೆದಿರುವ ಘಟನೆ ಬಗ್ಗೆ ರಾಜ್ಯದ ನಾನಾ ಭಾಗಗಳಲ್ಲಿ ವಕೀಲರು ಪ್ರತಿಭಟನೆ ಮಾಡಿರುವುದೂ ಕೂಡ ಇದೆ. ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳಿಗೂ ಕೂಡ ಪುಕಾರು ಕೊಟ್ಟಿದ್ದಾರೆ. ಮಾನ್ಯ ಗೃಹಸಚಿವರ ಗಮನಕ್ಕೂ ಕೂಡ ತಂದಿದ್ದಾರೆ. ಏತನ್ಮಧ್ಯೆ ಈ ಹಲ್ಲೆಗೊಳಗಾದ ವಕೀಲರು ಹುಣಸೂರು ನ್ಯಾಯಾಲಯದಲ್ಲಿ ಒಂದು ಪ್ರೈವೇಟ್ ಕಂಪ್ಲೇಂಟ್‌ನ್ನು ಫೈಲ್‌ಮಾಡುವುದರ ಮುಖಾಂತರ ಅಲ್ಲಿ ಕೇಸ್ ದಾಖಲು ಮಾಡಿ ಆ ಸಬ್ ಇನ್ಸ್‌ಪೆಕ್ಟರ್ ಮೇಲೆ ಸಮನ್ಸ್ ಕೂಡ ಇಷ್ಯೂ ಮಾಡಿದ್ದಾರೆ. ಮತ್ತು ಈಗ ಇಲಾಖೆ ವಿಚಾರಣೆ ಮಾಡುವುದಕ್ಕೆ ಇರುವುದು ಇಲಾಖೆಯ ವತಿಯಿಂದ ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಪರಿಶೀಲನೆ ಮಾಡಿ ತಪ್ಪಿತಸ್ಥರಾಗಿರುವ ಅಧಿಕಾರಿ ಬಹುಶಃ ಎಲ್ಲಿಯಾದರೂ ಇಲಾಖೆಯಲ್ಲಿ ಇದನ್ನು ಪರಿಶೀಲನೆ ಮಾಡದೇ ಇರುವ ಸಂದರ್ಭದಲ್ಲಿ ಅವರು ಮಾಡಿರುವ ತಪ್ಪು ಸಾಬೀತಾದರೆ ಖಂಡಿತವಾಗಿಯೂ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಊ) ಸೂರತ್ಕಲ್ ಕ್ಷೇತ್ರದ ವ್ಯಾಪ್ತಿಯಲ್ಲಿಎಂ.ಆರ್.ಪಿ.ಎಲ್.ಸಂಸ್ಥೆಯವರಿಗಾಗಿ ಜಮೀನು ಬಿಟ್ಟವರ ಪರಿಸ್ಥಿತಿ ಕುರಿತು.

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್): ಮಾನ್ಯ ಅಧ್ಯಕ್ಷರೇ, ಸೂರತ್ಕಲ್ ವಿಧಾನಸಭಾ ಕ್ಷೇತ್ರದ ಎಂಆರ್‌ಪಿಎಲ್ ಸಂಸ್ಥೆಯವರಿಗೆ ಜಮೀನು ಬಿಟ್ಟವರ ಸಂಕಷ್ಟವನ್ನು ಸಭೆಯ ಮುಂಭಾಗದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. 609 ಸಂತ್ರಸ್ಥ ಕುಟುಂಬದವರಿಗೆ ಚೆಳೆಯಾರಪದವು ಎಂಬ ಸ್ಥಳದಲ್ಲಿ ಪುನರ್‌ವಸತಿ ವ್ಯವಸ್ಥೆ ಮಾಡಿದೆ. ಆ ಪುನರ್ ವಸತಿ ವ್ಯವಸ್ಥೆಯಲ್ಲಿ ಕೆಐಎಡಿಬಿ ಯವರ ಜವಾಬ್ದಾರಿಯಿಂದ ಅವರಿಗೆ ಪ್ರಾಥಮಿಕ ಅವಶ್ಯಕತೆಯಾದ ನೀರನ್ನು ಒದಗಿಸಿಕೊಡುವುದಕ್ಕೆ ಇವತ್ತಿನವರೆಗೆ ಸಾಧ್ಯವಾಗಿಲ್ಲ. ಕೊಳವೆಬಾವಿಗಳನ್ನು ತೋಡುತ್ತಾರೆ. ಕೆಲವು ಬಾವಿಗಳಲ್ಲಿ ಉಪ್ಪು ನೀರು ಬರುತ್ತದೆ. ಕೆಲವು ಬಾವಿ ಬರಡಾಗುತ್ತದೆ. ಈಗ ಕೇವಲ ಎರಡು ಕೊಳವೆ ಬಾವಿಗಳ ಮೂಲಕ ಆ ಜನರು ಜೀವನ ಮಾಡುತ್ತಿದ್ದಾರೆ. ಮಳೆಗಾಲವಾದ್ದರಿಂದ ಅಲ್ಲಿ ಕೋಲಾಹಲ ಕಡಿಮೆಯಾಗಿದೆ. ಕಳೆದ ಬೇಸಿಗೆಯಲ್ಲಿ ಬಹಳ ಕೋಲಾಹಲವಾದಾಗ ನಾನು ಕಳೆದ ವಿಧಾನಸಭಾ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಈ